# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/3281/2014-15** **ದಿನಾಂಕ: 24.08.2015**

**ವಿಷಯ:** ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಕಿರಿಯ ಮಾರ್ಗದಾಳು ಹುದ್ದೆಗಳ ನೇಮಕಾತಿ-ಸಹನಾ ಶಕ್ತಿ ಪರೀಕ್ಷೆಗೆ ಕರೆ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವ ಕುರಿತು.

**ಉಲ್ಲೇಖ:** 1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3281/2014-15, ದಿನಾಂಕ: 12.06.2015.
2. ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3281/2014-15 ದಿನಾಂಕ: 17.07.2015.

*****

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಬೆವಿಕಂ/ಗುವಿಸಕಂನಿ/ಮವಿಸಕಂನಿ/ಹುವಿಸಕಂನಿ/ಚಾವಿಸನಿನಿ ಯಲ್ಲಿ ಕಿರಿಯ ಮಾರ್ಗದಾಳು ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಸಂಬಂಧಿಸಿದ ಕಂಪನಿಗಳ ವ್ಯಾಪ್ತಿಯಲ್ಲಿ ಕರ್ನಾಟಕದಾದ್ಯಂತ ವಿವಿಧ ಕೇಂದ್ರಗಳಲ್ಲಿ ದಿನಾಂಕ: 03.09.2015 ರಿಂದ ಸಹನಾ ಶಕ್ತಿ ಪರೀಕ್ಷೆಯನ್ನು ನಡೆಸಲಾಗುವುದು.

ನಿಗಧಿಪಡಿಸಿದ ಶೈಕ್ಷಣಿಯ ವಿದ್ಯಾರ್ಹತೆಯಲ್ಲಿ (ಎಸ್‌ಎಸ್‌ಎಲ್‌ಸಿ/10 ನೇ ತರಗತಿ) ಗಳಿಸಿರುವ ಅಂಕಗಳ ಅರ್ಹತೆಯ ಆಧಾರದ ಮೇಲೆ ಸಹನಾ ಶಕ್ತಿ ಪರೀಕ್ಷೆಗೆ ಹಾಜರಾಗಲು, ಪ್ರಕಟಿಸಿದ ಹುದ್ದೆಗಳಿಗೆ ಅನುಗುಣವಾಗಿ 1:5 ರ ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳನ್ನು (ಅನುಬಂಧ-1) ಹಾಗೂ ಶೇಕಡವಾರು ಕಟ್ ಆಫ್ ಅನ್ನು (ಅನುಬಂಧ-2) ರಲ್ಲಿ ಪ್ರಕಟಿಸಲಾಗಿದೆ. ದಿನಾಂಕ: 27.08.2015 ರಂದು ಕವಿಪ್ರನಿನಿಯ ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಿಸಿದ ಕಂಪನಿಯ ವೆಬ್‌ಸೈಟ್‌ನಲ್ಲಿ ಸಹನಾ ಶಕ್ತಿ ಇ-ಕರೆ ಪತ್ರಗಳನ್ನು ಲಭ್ಯಪಡಿಸಲಾಗುವುದು. ಸಂಬಂಧಿಸಿದ ಕಂಪನಿಯಲ್ಲಿ 1:5 ರ ಅನುಪಾತದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು, ಈ ಕೆಳಕಂಡ ವೈಬ್‌ಸೈಟ್ ಅನ್ನು ಲಾಗ್ ಆನ್ ಮಾಡುವುದರೊಂದಿಗೆ ತಮ್ಮ ಕರೆ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಮುದ್ರಣದ ಪ್ರತಿಯನ್ನು ತೆಗೆದುಕೊಳ್ಳುವುದು. ನಿಗಧಿಪಡಿಸಿರುವ ಪರೀಕ್ಷಾ ಸ್ಥಳದಲ್ಲಿ ಸಹನಾ ಶಕ್ತಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕರೆ ಪತ್ರದ ಮುದ್ರಿತ ಪ್ರತಿಯನ್ನು ಹಾಜರುಪಡಿಸತಕ್ಕದ್ದು. ಅಭ್ಯರ್ಥಿಗಳು ಸಹನಾ ಶಕ್ತಿ ಪರೀಕ್ಷಾ ಸ್ಥಳ/ಕೇಂದ್ರಗಳ ಬದಲಾವಣೆಗೆ ಯಾವುದೇ ಮನವಿ ಅಥವಾ ಕೋರಿಕೆಗಳಿಗೆ ಅವಕಾಶವಿರುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ. ಸಹನಾ ಶಕ್ತಿ ಪರೀಕ್ಷೆಗೆ ಯಾವುದೇ ಮುದ್ರಿತ ಕರೆ ಪತ್ರಗಳನ್ನು ಕವಿಪ್ರನಿನಿ/ಕಂಪನಿಯ ವತಿಯಿಂದ ಅಂಚೆ ಮುಖಾಂತರ ರವಾನಿಸಲಾಗುವುದಿಲ್ಲ.

| ನಿಗಮ/ಕಂಪನಿಯ ಹೆಸರು | ಸಹನಾ ಶಕ್ತಿ ಪರೀಕ್ಷೆಯ ದಿನಾಂಕ | ವೈಬ್‌ಸೈಟ್ | ಸಹಾಯವಾಣಿ ಸಂಖ್ಯೆ |
|---|---|---|---|
| ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ) | 03.09.2015 ರಿಂದ 05.09.2015 | www.kptcl.com | 080-22211527 Ext 270 |
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆವಿಕಂ) | 03.09.2015 ರಿಂದ 05.09.2015 | www.bescom.org | 080-22085061 |
| ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಗುವಿಸಕಂನಿ) | 03.09.2015 ರಿಂದ 06.09.2015 | www.gescom.in | 08472-256782 |
| ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮವಿಸಕಂನಿ) | 03.09.2015 ರಿಂದ 05.09.2015 | www.mesco.in | 0824-2441432 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹುವಿಸಕಂನಿ) | 03.09.2015 ರಿಂದ 06.09.2015 | www.hescom.co.in | 0836-2223867 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ) | 03.09.2015 ರಿಂದ 05.09.2015 | www.cescmysore.org | 0821-2343384 |

ಸಹನಾ ಶಕ್ತಿ ಪರೀಕ್ಷೆಗೆ ಇ-ಕರೆ ಪತ್ರವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ತೊಂದರೆ ಉಂಟಾದಲ್ಲಿ, ಅಭ್ಯರ್ಥಿಯು ಯಾವ ಕಂಪನಿಯಲ್ಲಿ 1:5 ರ ಅನುಪಾತದಲ್ಲಿ ಆಯ್ಕೆಯಾಗಿರುತ್ತಾರೊ ಆ ಕಂಪನಿಯ ಸಹಾಯವಾಣಿಯನ್ನು ದಿನಾಂಕ: 31.08.2015 ರ ಒಳಗೆ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು. ಸದರಿ ವಿಷಯದ ಬಗ್ಗೆ ದಿನಾಂಕ: 31.08.2015 ರ ನಂತರದ ಯಾವುದೇ ಮನವಿ/ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ. ಇನ್ನುಳಿದ ಹೆಚ್ಚಿನ ಮಾಹಿತಿಯು ಕರೆ ಪತ್ರದಲ್ಲಿ ಲಭ್ಯವಿರುತ್ತದೆ.

**ನಿರ್ದೇಶಕರು**
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.